**ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು**
**(3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)**
**ಎಂವಿಸಿ.ನಂ.1123 /2022**

**ಪಿ.ಡಬ್ಲ್ಯೂ-4**

| | |
|---|---|
| ಸಾಕ್ಷಿಯ ಹೆಸರು | ಸಿ. ರಾಜೇಂದ್ರಪ್ರಸಾದ್ |
| ತಂದೆಯ ಹೆಸರು | ಚಾಮುಂಡಯ್ಯ |
| ವಯಸ್ಸು | 42 ವರ್ಷ |
| ಹುದ್ದೆ | ಪಿಎಸ್ಐ, ವಿವಿ ಪುರಂ ಪೋಲೀಸ್ ಠಾಣೆ, ಬೆಂಗಳೂರು |
| ವಿಳಾಸ | ಪೊಲೀಸ್ ವಸತಿ ಗೃಹಗಳ ಸಮುಚ್ಚಯ, ಕೆ.ಆರ್. ಪುರಂ , ಬೆಂಗಳೂರು. |

**ಸಾಕ್ಷಿಗೆ ದಿನಾಂಕ 23-09-2025** ರಂದು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ ಜಿ.ಹೆಚ್.ಎಸ್ ವಕೀಲರಿಂದಃ

**ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿದ್ದು, ಅದಕ್ಕನುಗುಣವಾಗಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ.**

ದಿಃ**28.02.2020** ರಿಂದ ದಿಃ**08.07.2022** ರವರೆಗೆ ಬಸವನಗುಡಿ ಸಂಚಾರಿ ಪೊಲೀಸ್ ಠಾಣೆಯ, ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ**01.02.2022** ರಂದು ಸಂಜೆ **5.00** ಗಂಟೆಗೆ ಠಾಣಾ ಪ್ರಭಾರದಲ್ಲಿದ್ದಾಗ ಹೆಚ್.ಸಿ.**8295** ನವೀನ್ ರವರು ಠಾಣೆಗೆ ತಂದು ಹಾಜರುಪಡಿಸಿದ ಹೇಳಿಕೆ ದೂರನ್ನು ಪಡೆದು ಠಾಣಾ ಮೊ.ಸಂಖ್ಯೆ **17/2022** ನ್ನು ಭಾ.ದಂ. ಸಂ.ಕಲಂ **279, 337** ಮತ್ತು **134(ಎ)** ಐ.ಎಂ.ವಿ. ಕಾಯ್ದೆಯಡಿ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಹೆಚ್.ಸಿ.**8295** ನವೀನ್ ರವರಿಗೆ ಸದರಿ ಪ್ರಕರಣದಲ್ಲಿ ಅಪಘಾತಪಡಿಸಿದ ಆಟೋ ಸಂಖ್ಯೆ ಕೆಎ-**03**-ಡಿ-**3288** ವಾಹನ ಮತ್ತು ಚಾಲಕನನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ**02.02.2022** ರಂದು ಸದರಿ ಪ್ರಕರಣದ ತನಿಖೆ ಮುಂದುವರೆಸಿ ಪಂಚರನ್ನು ಅಪಘಾತ ಸ್ಥಳಕ್ಕೆ ಬರಮಾಡಿಕೊಂಡು ಅವರ

ಸಮಕ್ಷಮದಲ್ಲಿ ದೂರುದಾರರು ತೋರಿಸಿದಂತೆ ಸ್ಥಳ ಪಂಚನಾಮೆ ಮತ್ತು ಕಚ್ಚಾನಕಾಶೆ ತಯಾರಿಸಿರುತ್ತೇನೆ. ಅದೇ ಹೆಚ್.ಸಿ.9285 ರವರು ಜ್ಞಾಪನ ಪತ್ರಕ್ಕೆ ಉತ್ತರ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ04.02.2022 ರಂದು ಸದರಿ ಪ್ರಕರಣದ ತನಿಖೆ ಮುಂದುವರೆಸಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬೆಂಗಳೂರು ದಕ್ಷಿಣರವರಿಗೆ ಗಾಯಾಳು ಚಾಲನೇ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-05-ಕೆಬಿ-1805 ವಾಹನವನ್ನು ತಪಾಸಣೆ ಮಾಡಿ ವರದಿ ನೀಡುವಂತೆ ಲಿಖಿತವಾಗಿ ಮನವಿ ಮಾಡಿಕೊಂಡಿರುತ್ತೇನೆ. ಅದೇ ದಿನ ಎ.ಆರ್.ಟಿ.ಓ. ಬೆಂಗಳೂರು ದಕ್ಷಿಣರವರು ತಪಾಸಣೆ ಮಾಡಿ ವರದಿ ನೀಡಿರುತ್ತಾರೆ. ದಿಃ04.02.2022 ರಂದು ಲೀಲಾವತಿ ಆಸ್ಪತ್ರೆಯಿಂದ ಗಾಯಾಳು ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ15.04.2022 ರಂದು ಸದರಿ ಪ್ರಕರಣದಲ್ಲಿ ಅಪಘಾತಪಡಿಸಿ ತಲೆಮರೆಸಿಕೊಂಡಿದ್ದ ಆಟೋ ಮತ್ತು ಚಾಲಕನನ್ನು ಪತ್ತೆ ಮಾಡಿ ವರದಿ ನೀಡುವಂತೆ ಹೆಚ್.ಸಿ.10056 ವಿನಯ್‌ರವರಿಗೆ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ16.04.2022 ರಂದು ಹೆಚ್.ಸಿ.10056 ವಿನಯ್ ರವರು ಪತ್ತೆಯಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ದಿಃ16.05.2022 ರಂದು ಗಾಯಾಳು ಶ್ರೀಮತಿ ಎಂ.ಐ. ಮಹಾಲಕ್ಷ್ಮೀ ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ24.05.2022 ರಂದು ತನಿಖೆ ಮುಂದುವರೆಸಿ ಹೆಚ್.ಸಿ.10135 ಮಧುಸೂಧನ್ ರವರಿಗೆ ಸದರಿ ಪ್ರಕರಣದಲ್ಲಿ ಅಪಘಾತಪಡಿಸಿ ತಲೆಮರೆಸಿಕೊಂಡಿದ್ದ ಆಟೋ ಮತ್ತು ಚಾಲಕನನ್ನು ಪತ್ತೆ ಮಾಡಿ ವರದಿ ನೀಡುವಂತೆ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ25.05.2022 ರಂದು ಹೆಚ್.ಸಿ. ಮಧುಸೂಧನ್ ರವರು ಪತ್ತೆಯಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ದಿಃ09.06.2022 ರಂದು ಹೆಚ್.ಸಿ.8295 ನವೀನ್ ರವರಿಗೆ ಸದರಿ ಪ್ರಕರಣದಲ್ಲಿ ಅಪಘಾತಪಡಿಸಿ ತಲೆಮರೆಸಿಕೊಂಡಿದ್ದ ಆಟೋ ಮತ್ತು ಚಾಲಕನನ್ನು ಪತ್ತೆ ಮಾಡಿ ವರದಿ ನೀಡುವಂತೆ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ10.06.2022 ರಂದ ಹೆಚ್.ಸಿ. ನವೀನ್ ರವರು ಪತ್ತೆಯಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ದಿಃ08.07.2022 ರಂದು

ಬಸವನಗುಡಿ ಸಂಚಾರ ಪೊಲೀಸ್ ಠಾಣೆಯಿಂದ ವರ್ಗಾವಣೆಗೊಂಡಿದ್ದರಿಂದ ಸದರಿ ಪ್ರಕರಣದ ಕಡತವನ್ನು ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಕೆ.ಎನ್. ವಕೀಲರಿಂದಃ**

ಹೆಚ್.ಸಿ.8295 ನವೀನ್ ರವರು ನಾನು ನೀಡಿದ ಜ್ಞಾಪನ ಪತ್ರದ ಎರಡು ದಿನಗಳ ನಂತರ ವರದಿ ನೀಡಿರುತ್ತಾರೆ. ಕೆಎ-03-ಡಿ-3288 ಆಟೋಗೆ ಸಂಬಂಧಿಸಿದಂತೆ ಚಾಸ್ಸಿ ನಂಬರ್ ಮತ್ತು ಇಂಜಿನ್ ನಂಬರ್ ನ್ನು ಸಾರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪರಿಶೀಲನೆ ಮಾಡಿರುತ್ತೇನೆ. ಸದರಿ ಆಟೋದ ಮಾಲೀಕನನ್ನು ಫೋನ್ ಮುಖಾಂತರ ಸಂಪರ್ಕಿಸಿದಾಗ ಆತ ಅಪಘಾತದ ದಿನ ತನ್ನ ಆಟೋವನ್ನು ಚಾಲನೇ ಮಾಡಿಲ್ಲವೆಂದು ಬೇರೆ ಯಾರೋ ತನ್ನ ಆಟೋದ ನಂಬರನ್ನು ಸಾರಿಗೆ ವಾಹನಕ್ಕೆ ಅಳವಡಿಸಿಕೊಂಡು ಚಾಲನೇ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾನೆ. ಅಪಘಾತದಲ್ಲಿ ಒಳಗೊಂಡ ನೈಜ ಆಟೋವನ್ನು ಪತ್ತೆ ಮಾಡಲು ನಾನು ವೈಯಕ್ತಿಕವಾಗಿ, ಸಿಬ್ಬಂದಿ, ಭಾತ್ಮೀದಾರರು ಮತ್ತು ನಮ್ಮ ಠಾಣಾ ಸುತ್ತ-ಮುತ್ತ ಇತರ ಠಾಣಾಧಿಕಾರಿಗಳಿಗೂ ಮಾಹಿತಿ ನೀಡಿ ಪ್ರಮಾಣಿಕ ಪ್ರಯತ್ನ ಮಾಡಿರುತ್ತೇನೆ. ನಾನು ಸದರಿ ಠಾಣೆಯಿಂದ ವರ್ಗಾವಣೆಗೊಂಡ ನಂತರ ಸದರಿ ಪ್ರಕರಣ ಮುಂದಿನ ಹಂತ ಏನಾಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಕಡತವನ್ನು ನೋಡಿ ಸಿ-ವರದಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**
**ಮರು-ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.,**